6. ನಿಲುವಳಿ ಸೂಚನೆ
(ಮಂಡನೆಗೆ ಅನುಮತಿ ಕೋರಿಕೆ)

ವಿಷಯ: ಮಾನ್ಯ ಲೋಕಾಯುಕ್ತರು ಅಕ್ರಮ ಗಣಿಗಾರಿಕೆ ಬಗ್ಗೆ ನೀಡಿರುವ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳದಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ಇಂದು ಬೆಳಿಗ್ಗೆ ಕೊಟ್ಟಿದ್ದೇವೆ. Question hour ಮುಗಿಯಲಿ ಎಂದು ತಾವು ಹೇಳಿದಿರಿ. ಅದಕ್ಕಾಗಿ ನಿಮ್ಮ ಮಾತಿಗೆ ಗೌರವ ಕೊಟ್ಟು, question hour ಗಿಂತ ಮುಂಚಿತವಾಗಿ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ನಾನು ಹಿಂದಿನ ಅಧಿವೇಶನದಲ್ಲಿಯೂ ಕೂಡ adjournment motion ಮೂಲಕ ತಂದಿದ್ದೆ. ಆದರೆ ನೀವು ಅದನ್ನು Rule 69 ಗೆ convert ಮಾಡಿ, ಚರ್ಚೆ ಅಜೆಂಡಾದಲ್ಲಿಯೂ ಕೂಡ ಬಂದಿತ್ತು. Unfortunately, ಅಂದು ಕೊನೆ ದಿನ. ಕೋರಂ ಇರಲಿಲ್ಲ. ಚರ್ಚೆ ಆಗಲಿಲ್ಲ. ಕೋರಂ ಇರಲಿಲ್ಲ ಚರ್ಚೆ ಮಾಡಿದರು ಎಂದು ನಾನು ಈಗ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮಲ್ಲೂ ಎಂ.ಎಲ್.ಎ. ಗಳು ಇರಲಿಲ್ಲ. ಅದರಿಂದಾಗಿ ಅದನ್ನು ಅಲ್ಲಿಗೇ ಬಿಟ್ಟುಬಿಡುತ್ತೇನೆ. ಶ್ರೀ ಸುರೇಶ್ ಕುಮಾರ್ ರವರು ಹಾಗೂ ಕು.ಶೋಭಾ ಕರಂದ್ಲಾಜೆ ಇಬ್ಬರು ಮಾತ್ರ ಅವರಲ್ಲಿದ್ದರು. ಮುಖ್ಯಮಂತ್ರಿಗಳಿದ್ದರೂ ಅವರು ಇಲ್ಲಿಗೆ member ಇರಲಿಲ್ಲ, ಲೆಕ್ಕಕ್ಕೇನು ಬರುತ್ತಿರಲಿಲ್ಲ. So, ಇವತ್ತು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತೇವೆ. ಇದು ಬಹಳ ಪ್ರಮುಖವಾದ ವಿಚಾರವಾಗಿರುವುದರಿಂದ ಇದರ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಲೋಕಾಯುಕ್ತ ವರದಿಯನ್ನು 27.07.2011ರಲ್ಲಿ ರಾಜ್ಯಪಾಲರಿಗೆ, Chief Secretary ಅವರಿಗೆ ಕೊಟ್ಟಿದ್ದಾರೆ.

ಸರ್ಕಾರದ ಕೈ ಸೇರಿದೆ. ಅಂದರೆ 6 ತಿಂಗಳಿಗೂ ಹೆಚ್ಚಾಯಿತು. ನಿನ್ನೆ 27 ಕ್ಕೆ ಆರು ತಿಂಗಳಾಯಿತು. ಅದಾದ ನಂತರ ಲೋಕಾಯುಕ್ತ ಮಾನ್ಯ ಸಂತೋಷ್ ಹೆಗಡೆಯವರು ಕೂಡ ಅಗಸ್ಟ್‌ನಲ್ಲಿ ವರದಿ ಕೊಟ್ಟ ಮೇಲೆ ಅವರ ಅವಧಿ ಮುಗಿಯಿತು. ಅಲ್ಲದೇ ಲೋಕಾಯುಕ್ತರ ಹುದ್ದೆಯೂ ಕಳೆದ 6 ತಿಂಗಳಿನಿಂದ ಖಾಲಿ ಬಿದ್ದಿರುತ್ತದೆ. ಗೌರ್ನರ್ ಮಾಡಬೇಕು, ಇರಲಿ, ಅದರ ಬಗ್ಗೆ ಚರ್ಚೆ ಬಂದಾಗ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ವರದಿ ಬಂದ ಮೇಲೆ ಸರ್ಕಾರ ಇವತ್ತಿನವರೆಗೆ 6 ತಿಂಗಳಿನಲ್ಲಿ ಲೋಕಾಯುಕ್ತ ವರದಿಯಲ್ಲಿ ಏನೇನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸುಮಾರು 31 chapterಗಳಲ್ಲಿ ಬಹಳ ದೀರ್ಘವಾದಂತಹ ಬಹಳ exhaustive report ಕೊಟ್ಟಿದ್ದಾರೆ. ಅದು ಅಂತಿಮ ವರದಿ. ಅದಕ್ಕಿಂತ ಮುಂಚಿತವಾಗಿ ಅಂದರೆ 18.12.2008 ರಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ಮೊದಲನೆಯ ವರದಿ. 18.12.2008 ಆಮೇಲೆ 27.7.2011 ಕ್ಕೆ ಎರಡನೇ ಹಾಗೂ ಅಂತಿಮ ವರದಿ ಕೊಟ್ಟಮೇಲೆ ಲೋಕಾಯುಕ್ತರು 2ನೇ ವರದಿಯಲ್ಲಿ ಏನು ಹೇಳಿದ್ದಾರೆಂದರೆ ನಾನು ಕೊಟ್ಟಿರುವ ಮೊದಲನೇ ವರದಿಯ ಶೀಫಾರಸ್ಸುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿಲ್ಲ. ಶಿಫಾರಸ್ಸುಗಳನ್ನು ಅನುಷ್ಠಾನ ಮಾಡಿಲ್ಲ. ಅದರ ಮೇಲೆ ಕಾಂಕ್ರೀಟಾಗಿ ಏನು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿ ಅವರ ಅಸಮಾಧಾನವನ್ನು ಎರಡನೇಯ ವರದಿಯಲ್ಲಿ ವ್ಯಕ್ತಪಡಿಸಿದ್ದಾರೆ. ಆ ರೀತಿ ಹೇಳುತ್ತಾ ಜೊತೆಗೆ ನಾನು ಮೊದಲನೆಯ ವರದಿ ಕೊಟ್ಟಮೇಲೆ, ಎರಡು ಅಂಶಗಳನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಲೋಕಾಯುಕ್ತರು ಮೊದಲನೆ ವರದಿ ಕೊಟ್ಟ ಮೇಲೆ ಅಕ್ರಮವಾಗಿ ಗಣಿಗಾರಿಕೆ ಜಾಸ್ತಿಯಾಯಿತು ಮತ್ತು ಅಕ್ರಮ ರಫ್ತು ಕೂಡ ಜಾಸ್ತಿಯಾಯಿತು. 2008ರಲ್ಲಿ ವರದಿ ಕೊಟ್ಟಮೇಲೆ ಅಕ್ರಮ ಗಣಿಗಾರಿಕೆ ಜಾಸ್ತಿಯಾಯಿತು. ಅಕ್ರಮವಾಗಿ ರಫ್ತಾಗಲೂ ಕೂಡ ಜಾಸ್ತಿಯಾಯಿತು. ಅದರರ್ಥ, ನಾನು ಏತಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ಸರ್ಕಾರ 2008ರಲ್ಲಿ ಲೋಕಾಯುಕ್ತರು

ಕೊಟ್ಟಂತಹ ಮೊದಲನೇ ವರದಿಯ ಶಿಫಾರಸ್ಸುಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಂಡಿದ್ದರೆ, ಇವತ್ತು ರಾಜ್ಯಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಯಿತಲ್ಲಾ, ಆ ನಷ್ಟ ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಸರ್ಕಾರ ಅದನ್ನು ಮಾಡಲೇ ಇಲ್ಲ. ಕಾರಣವೇನೆಂದರೆ, ಈ ಅಕ್ರಮ ಗಣಿಗಾರಿಕೆಯಲ್ಲಿ ಈ ಸರ್ಕಾರದಲ್ಲಿ ಇದ್ದಂಥ ಪ್ರಭಾವಿ ಮಂತ್ರಿಗಳೂ ಸಹ ಸೇರಿಕೊಂಡಿದ್ದರು. ಅದರಿಂದ ಮಾಡುವುದಕ್ಕಾಗಲಿಲ್ಲ. ಅಂಕಿ ಅಂಶಗಳನ್ನೆಲ್ಲಾ ಕೊಟ್ಟಿದ್ದಾರೆ. ಈ ವಿಷಯವನ್ನು detail ಆಗಿ ಚರ್ಚೆ ಮಾಡುವಾಗ ಯಾವ ಕಾಲದಲ್ಲಿ ಎಷ್ಟೆಷ್ಟು ಆಗಿದೆ ಹಾಗೂ illegal exportನ ಬಗ್ಗೆಯೂ ನಾನು ಹೇಳುತ್ತೇನೆ. ಈಗ ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆಮೇಲೆ ದಿನಾಂಕ 20.02.2010 ರಲ್ಲಿ ಲೋಕಾಯುಕ್ತ ಅಧಿಕಾರಿಗಳು ಬೇಲೇಕೇರಿ ಬಂದರನ್ನು ರೈಡ್ ಮಾಡಿದರು. ಮತ್ತೆ ದಿನಾಂಕ 20.03.2010ರಲ್ಲಿ ಅಲ್ಲಿದ್ದಂಥ ಅಕ್ರಮ ಕಬ್ಬಿಣದ ಅದಿರನ್ನು ಮಹಜರ್ ಮಾಡಿ ಸೀಜ್ ಮಾಡುತ್ತಾರೆ. ಇದನ್ನು ಲೋಕಾಯುಕ್ತ ಅಧಿಕಾರಿಗಳು ಏಕೆ ಮಾಡಿದರು ಎಂದರೆ ಅಲ್ಲಿ ಸಾರ್ವಜನಿಕರಿಂದ ದೂರು ಬರುತ್ತದೆ. ಆ ದೂರು ಬಂದ ಮೇಲೆ ಇವರು ರೈಡ್ ಮಾಡಿ, ಎಲ್ಲವನ್ನೂ ಅಧಿಕಾರಿಗಳು ಮಾಡಿದ ಮೇಲೆ ಅಲ್ಲಿ ಸುಮಾರು 8 ಲಕ್ಷ ಚಿಲ್ಲರೆ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಇರುತ್ತದೆ. ಅನಂತರ ಒಂದು ಸಾರಿ ಪತ್ರಿಕೆಯಲ್ಲಿ ಬರುತ್ತದೆ, ಬೇಲೇಕೇರಿ ಬಂದರಿನಲ್ಲಿದ್ದಂಥ ಕಬ್ಬಿಣದ ಅದಿರು ಕಳ್ಳತನವಾಗಿದೆ. ಮತ್ತೆ ಜೂನ್ ತಿಂಗಳಿನಲ್ಲಿ ಅದನ್ನು inspection ಮಾಡುತ್ತಾರೆ. ದಿನಾಂಕ 20.03.2010 ರಲ್ಲಿ ಸೀಜ್ ಆಗಿತ್ತು, ಜೂನ್ ತಿಂಗಳಿನಲ್ಲಿ ಕಳ್ಳತನವಾಗಿದೆ ಎಂದು ಪತ್ರಿಕೆಯಲ್ಲಿ ಬರುತ್ತದೆ. ಅಲ್ಲಿ ಹೋಗಿ ನೋಡಿದೆ ಸುಮಾರು 6 ಲಕ್ಷ 10 ಸಾವಿರ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಕಳುವಾಗಿರುತ್ತದೆ. ಇದಾದ ನಂತರ ಇಷ್ಟೆಲ್ಲಾ ಆದರೂ ಕೂಡಾ, ಇದರ ಮೇಲೆ ಲೋಕಾಯುಕ್ತ enquiry ನಡೆಯುತ್ತಿದ್ದರೂ ಕೂಡಾ ಸರ್ಕಾರ ಇದನ್ನು ಸಿ.ಐ.ಡಿ.ಗೆ ಕೊಡುತ್ತಾರೆ. ಆ ಸಿ.ಐ.ಡಿ ವರದಿ ಏನಾಯಿತು ಎಂದು ಯಾರಿಗೂ ಗೊತ್ತಿಲ್ಲ. ಸಿ.ಐ.ಡಿ. ಯವರು ಏನು ಮಾಡಿದರು? ಎಂದು ಗೊತ್ತಿಲ್ಲ, 6

ಲಕ್ಷ 10 ಸಾವಿರ ಮೆಟ್ರಿಕ್ ಟನ್ ಕಳುವಾಗಿರುವುದು ಗೊತ್ತಿಲ್ಲ? ಏನಾಯಿತು ಅಂತ ಗೊತ್ತಿಲ್ಲ. ಯಾರು ಮಾಡಿದರು ಎನ್ನುವುದು ಗೊತ್ತಿಲ್ಲ. ಯಾರು ಕದ್ದರು? ಎಲ್ಲಿಗೆ ಕಳುಹಿಸಿದರು? ಯಾರಿಗೂ ಗೊತ್ತಿಲ್ಲ. ಅನಂತರ, ಇದಾದ ಮೇಲೂ ಕೂಡಾ ಅಕ್ರಮವಾಗಿ ಕಬ್ಬಿಣದ ಅದಿರು ರಫ್ತು ಆಗುವುದು, ಅಕ್ರಮ ಗಣಿಗಾರಿಕೆ ನಡೆಯುವುದು ಎಲ್ಲಾ ಆಗುತ್ತದೆ. ನಾನು ಏತಕ್ಕಾಗಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಮೊದಲನೇ ವರದಿ ಕೊಟ್ಟ ಮೇಲೆ ಶಿಫಾರಸ್ಸುಗಳು ಜಾರಿಯಾಗಲಿಲ್ಲ. 2ನೇ ವರದಿ ಕೊಟ್ಟು ಈಗಾಗಲೇ 6 ತಿಂಗಳಾಯಿತು. ಅದರ ಮೇಲೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಏನಾಗುತ್ತಿದೆ? ಅದನ್ನು ಸರ್ಕಾರ ಏನು ಮಾಡಿದರು? ಇವರು ವರದಿ ಕೊಟ್ಟ ಮೇಲೆ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡರು. ಸರ್ಕಾರ ವರದಿಯನ್ನು ಸಂಪೂರ್ಣವಾಗಿ ನಾವು ಒಪ್ಪಿಕೊಂಡಿದ್ದೇವೆ ಎಂದು ಇವತ್ತಿನವರೆಗೆ ಅವರ ನಿಲುವನ್ನು ಘೋಷಣೆ ಮಾಡಿಲ್ಲ. ಅದರ ಬದಲು ಏನು ಮಾಡುತ್ತಾರೆಂದರೆ ವರದಿಯನ್ನು ಒಪ್ಪಿಕೊಳ್ಳದೇ, ಒಂದು ಉನ್ನತ ಮಟ್ಟದ ಸಮಿತಿ ಮಾಡಿದ್ದೇವೆ, ಅಧಿಕಾರಿ ಸಮಿತಿ ಮಾಡಿದ್ದೇವೆ, ಆ ಸಮಿತಿಯಿಂದ ರಿಪೋರ್ಟ್ ಬರಲಿ, ಆಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು Additional Chief Secretary ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು. ಆ ಕಮಿಟಿ ಇವರು ಜುಲೈನಲ್ಲಿ ಬಂದ ಮೇಲೆ ಆಗಸ್ಟ್‌ನಲ್ಲಿ ಮಾಡಿದ್ದಾರೆ. ದಿನಾಂಕ 18.08.2011ರಲ್ಲಿ ಕಮಿಟಿ ಮಾಡಿದ ಮೇಲೆ ಅವರು ದಿನಾಂಕ 24.10.2011ಕ್ಕೆ ವರದಿ ಕೊಟ್ಟಿದ್ದಾರೆ. ಆ ವರದಿ ಕೊಟ್ಟಮೇಲೆ ಅದು ಕ್ಯಾಬಿನೆಟ್ ಮುಂದೆ ಹೋಗಿದೆ. ಕ್ಯಾಬಿನೆಟ್ ಅವರಿಗೆ ಗೊತ್ತಿದ್ದಂಥದ್ದು, ಈ ಅಧಿಕಾರೇತರ ರಾಜಕಾರಣಿಗಳಿದ್ದಾರಲ್ಲ, ಎಂ.ಎಲ್.ಎ. ಗಳು, ಮಂತ್ರಿಗಳು ಈ ಶಿಫಾರಸ್ಸಿನಲ್ಲಿ ಯಾರ್ಯಾರು indict ಮಾಡಿದ್ದರು, ಅವರ ಮೇಲೆ ಕಮಿಟಿ ಏನೂ ಶಿಫಾರಸ್ಸು ಮಾಡುವುದಕ್ಕೆ ಬರುವುದಿಲ್ಲ, ಏನೂ recommend ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಬಿಟ್ಟುಬಿಟ್ಟಿದ್ದಾರೆ. ಇದರಲ್ಲಿ ಸುಮಾರು 617

ಅಧಿಕಾರಿಗಳು ಸೇರಿಕೊಂಡಿದ್ದಾರೆ. ಎಷ್ಟು ದಿಗ್ಭ್ರಮೆಗೊಳಿಸತಕ್ಕ ರೀತಿಯಲ್ಲಿ ವರದಿ ಇದೆ ಅಂದರೆ ಬಳ್ಳಾರಿಯಲ್ಲಿ.....

ಶ್ರೀ ಎಸ್.ಎ. ರಾಮದಾಸ್:– ಈ ಬಗ್ಗೆ ಸಮಗ್ರವಾಗಿ ಚರ್ಚೆಯಾಗುವುದು ಬಹಳ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ:– ಚರ್ಚೆ ಮಾಡುತ್ತಿರುವಾಗ ನಿಮ್ಮ objection ಏನಿದೆ? ಚರ್ಚೆ ಮಾಡಬೇಕಲ್ಲ?

ಶ್ರೀ ಎಸ್.ಎ. ರಾಮದಾಸ್:– ಚರ್ಚೆ ಯಾವ ರೂಲ್‌ನಲ್ಲಿ ಅಂಥ ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ರೂಲ್‌ನಲ್ಲಿ 60 ರಲ್ಲಿ Adjournment motion ತಂದೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಸ್.ಎ. ರಾಮದಾಸ್:– Merit of the case ನಲ್ಲಿ ಹೋಗುವುದಕ್ಕೋಸ್ಕರ ಹೇಳಿದೆ. Under what provision? ಎಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ರೂಲ್ 60. ನೋಡಿ ಈ ಪದ್ಧತಿ ನಿಲ್ಲಬೇಕು. I have been permitted to make a preliminary submission. ಸುಮ್ಮ ಸುಮ್ಮನೇ ಅಡ್ಡ ಬರುವುದು ಸರಿಯಲ್ಲ. ಅಧ್ಯಕ್ಷರೇ, ಹೇಳಿ ಅವರಿಗೆ.

ಅಧ್ಯಕ್ಷರು:– 5 ನಿಮಿಷದಲ್ಲಿ ಮುಗಿಸುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ:– 5 ನಿಮಿಷದಲ್ಲಿ ಮುಗಿಸುತ್ತೇನೆ ಕುಳಿತುಕೊಳ್ಳಿ ರಾಮದಾಸ್. ಯಾಕ್ರೀ ನಮ್ಮ ಮೈಸೂರು ಜಿಲ್ಲೆಯವರೇ ಎತ್ತಿಕಟ್ಟುಬಿಟ್ಟಿದ್ದಾರೆ ನಿಮಗೆ. ಆಗ ಬಸವರಾಜ್ ಇದ್ದರು ಈಗ ನೀವು ಬಂದಿದ್ದೀರೇನು? ಬಸವರಾಜ್ ಸುಮ್ಮನಾಗಿದ್ದಾರೆ, ನೀವು ಯಾಕ್ರೀ ರಾಮದಾಸ್? ನಾನು ಈ ಸೀಟೇ ಬಿಟ್ಟುಬಿಡ್ತೀನಿ ಈಗ.

ಶ್ರೀ ಎಸ್.ಎ. ರಾಮದಾಸ್:– ನೀವು ಹೇಳುವುದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ರಾಮದಾಸ್ ಇದು ಬಹಳ ಮಹತ್ತರವಾದ ವಿಚಾರ. 16 ಸಾವಿರದ 85 ಕೋಟಿ, ಇದು ಎಲ್ಲಿಂದ? 2006–07 ರಿಂದ 2010–11ರವರೆಗೆ ನಡೆದಿರುವುದು, Actually reference ಮಾಡಿದ್ದುದು ಎಲ್ಲಿಂದ ಅಂದರೆ ಜನವರಿ 2000 ದಿಂದ ಮಾಡಬೇಕು ಎಂದು ಇತ್ತು. 2000ದಿಂದ 2006 ಕ್ಕಿಂತ ಹಿಂದಕ್ಕೆ information ಇಲ್ಲ. ಅಲ್ಲಿ Mines & Geology Departmentನಲ್ಲಿ permit ಕೊಟ್ಟಿದ್ದಕ್ಕೆ ಏನೂ ಲೆಕ್ಕ ಇಲ್ಲ. ಏನೂ ಸಿಗಲಿಲ್ಲವೆಂದು ಹೇಳಿ ಅದನ್ನು ಲೆಕ್ಕ ಮಾಡುವುದಕ್ಕೆ ಆಗಲಿಲ್ಲ. That is what ಈ report ನಲ್ಲಿ ಲೋಕಾಯುಕ್ತ ಹೇಳಿರುವುದು. Prior to 2006 Mines & Geology Department ನಿಂದ permit ಕೊಟ್ಟಿರುವುದಕ್ಕೆ ಏನು ದಾಖಲಾತಿಗಳು ಇಲ್ಲ, ಬೇರೆ information ಇಲ್ಲ, ಆದ್ದರಿಂದ 2000 ದಿಂದ 2005–06ರವರೆಗೆ ಏನೂ ಸಿಗುತ್ತಿಲ್ಲ. ಆಗಲೂ ನಷ್ಟವಾಗಿದೆ. ಆಗಲೂ ಅಕ್ರಮ ಗಣಿಗಾರಿಕೆ ನಡೆದಿದೆ. ಅಕ್ರಮ ಗಣಿಗಾರಿಕೆ ಮಾಡುವುದಕ್ಕೆ ಪ್ರಾರಂಭವಾಗಿದ್ದು ಯಾವಾಗ ಅಂದರೆ 2002–03ರಿಂದ. ಯಾವಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕೆ ಬೆಲೆ ಸಿಕ್ಕಿತ್ತು, ಒಂದು ಟನ್ ಕಬ್ಬಿಣದ ಅದಿರು ತೆಗೆಯುವುದಕ್ಕೆ ರೂ. 150 ಖರ್ಚಾಗುತ್ತಿತ್ತು. ರೂ. 16/– royalty ಕಟ್ಟಿ ರೂ. 2,500/– ರೂ. 3,000/– ಕ್ಕೆ ಒಂದು ಟನ್ ಮಾರಾಟ ಬೇಗ ಸಿಕ್ಕಿತು, ಲೂಟಿ ಹೊಡೆದು ಬಿಟ್ಟರು. ಅದಕ್ಕೆ ಚಿನ್ನದ ಕುರ್ಚಿಗಳ ಮೇಲೆ, ಚಿನ್ನದ ಅಂಬಾರಿಗಳ ಮೇಲೆ ಕುಳಿತುಕೊಳ್ಳುವುದಕ್ಕೆ ಶುರು ಮಾಡಿದರು. ಚಿನ್ನದ ಖಡ್ಗಗಳನ್ನೆಲ್ಲಾ ಎಳೆಯುವುದು, ಚಿನ್ನದ ಕಿರೀಟ ಹಾಕುವುದು, ದೇವಸ್ಥಾನಗಳಲ್ಲಿ ವಜ್ರದ ಕಿರೀಟಗಳನ್ನು ಹಾಕುವುದಕ್ಕೆ ಶುರುವಾದರು. ಇದು "ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ ತರಹ". But, ultimately ಸರ್ಕಾರಕ್ಕೆ ನಷ್ಟವಾಯಿತು. ಸರ್ಕಾರಕ್ಕೆ ಲೋಕಾಯುಕ್ತರು 2006 ರಿಂದ 2007 ರ ಈಚೆಗೆ ಲೆಕ್ಕ ಹಾಕಿರುವಂಥದ್ದು, ಲೋಕಾಯುಕ್ತಕ್ಕೆ ಲೆಕ್ಕ ಸಿಕ್ಕರುವಂಥದ್ದು, ಇನ್ನೊಂದು ಲೋಕಾಯುಕ್ತರು ಏನು ಹೇಳುತ್ತಾರೆಂದರೆ ಈ ಗೋವಾ ಮತ್ತು ಮಡಗೋವಾ ಬಂದರುಗಳಿಂದ

ಹೋದದ್ದು ಲೆಕ್ಕ ಇಲ್ಲವಂತೆ. ಯಾಕೆಂದರೆ ಅವರು bend ಮಾಡಿದ್ದಾರೆ. ಅವರೆಲ್ಲಾ ಸ್ವಂತಕ್ಕೆ ಕಬ್ಬಿಣದ ಅದಿರು ಉಪಯೋಗಿಸಿಕೊಂಡದ್ದಕ್ಕೆ ಮತ್ತು ವಿದೇಶಕ್ಕೆ ಕಳುಹಿಸುವುದಕ್ಕೋಸ್ಕರ bend ಮಾಡುತ್ತಾರೆ. Because ಗೋವಾದಲ್ಲಿ ಸಿಗುವಂಥ ಕಬ್ಬಿಣದ ಅದಿರು ಕಳಪೆ ಗುಣಮಟ್ಟದ್ದು.

ಶ್ರೀ ಇ. ತುಕಾರಾಂ:– Low gradeನದ್ದು.

ಶ್ರೀ ಸಿದ್ದರಾಮಯ್ಯ:– Low grade, ನಮ್ಮಲ್ಲಿ ಸಿಗುವಂಥ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಸಂಡೂರು ಈ ಭಾಗಗಳಲ್ಲಿ ಸಿಗುವಂಥದ್ದು ಹೆಚ್ಚು ಗುಣಮಟ್ಟದ್ದು ಮತ್ತು ರಫ್ತಿಗೆ ಯೋಗ್ಯವಾದದ್ದು, ಹೆಚ್ಚು ಬೆಲೆ ಸಿಗುವಂಥ ಕಬ್ಬಿಣ ಅದು. ಈ ರೀತಿ ಇರುವುದರಿಂದ ಒಟ್ಟು 16 ಸಾವಿರ 85 ಕೋಟಿ ನಷ್ಟವಾಗಿದೆ. 2 ಕೋಟಿ 98 ಲಕ್ಷ ಇದು ಲೆಕ್ಕ ಸಿಕ್ಕಿರುವುದು. ಲೆಕ್ಕ ಸಿಗದೇ ಇರುವುದು ಬೇರೆ ಬೇರೆ ಇದೆ. ಗೋವದ್ದು ಲೆಕ್ಕ ಸಿಕ್ಕಿಲ್ಲ. 2006ರಿಂದ ಹಿಂದಿನದ್ದನ್ನು ಬಿಟ್ಟು, ಲೆಕ್ಕ ಸಿಕ್ಕಿರುವುದು 2 ಕೋಟಿ 98 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು illegal ಆಗಿ export ಆಗಿದೆ. ಅದರ ಬೆಲೆ 12 ಸಾವಿರದ 228 ಕೋಟಿ ರೂಪಾಯಿಗಳು. 2 ಕೋಟಿ 98 ಲಕ್ಷ ಅವತ್ತಿನ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದು. ಅವತ್ತಿನ ಡಾಲರ್ ಬೆಲೆ ಎಷ್ಟಿತ್ತು? ಎಷ್ಟು ಡಾಲರ್‌ಗೆ ಮಾರಾಟ ಮಾಡಿದರು. ಅದರ ಬೆಲೆ ತೆಗೆದುಕೊಂಡಿರುವುದು. ಮಾನ್ಯ ಅಧ್ಯಕ್ಷರೆ, ಅದರ ಜೊತೆಗೆ invoicing ಆಗಿರುವುದು 2,222 ಕೋಟಿ ಬೆಲೆಯದ್ದು.

ಅಧ್ಯಕ್ಷರು:– Facts ಬೇಡ.....

ಶ್ರೀ ಸಿದ್ದರಾಮಯ್ಯ:– ಇಲ್ಲ, facts ಇಲ್ಲ. ನಾನು ಹೇಳುವ ವಿಷಯ ನಿಮಗೆ convince ಆಗಬೇಕಲ್ಲ? ಈ ರಾಜ್ಯವನ್ನು ಉಳಿಸಬೇಕಲ್ಲ? ಜವಾಬ್ದಾರಿ ನಮಗೂ, ನಿಮಗೂ ಇದೆಯಲ್ಲ? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಆಮೇಲೆ illegal extortion, illegal transport, illegal export ಇದು ಬೇರೆ 1850 ಕೋಟಿ. Forest Tax, Royalty ಕಟ್ಟದಿರುವುದು. ಇವೆಲ್ಲವನ್ನೂ ಸೇರಿ, ಸುಪ್ರಿಂಕೋರ್ಟಿನವರು Central Empowered Committee ಎಂದು ಒಂದು ಕಮಿಟಿ ಮಾಡಿದ್ದಾರೆ

ಮಾನ್ಯ ಅಧ್ಯಕ್ಷರೆ, ಅವರು ಶಿಫಾರಸ್ಸು ಮಾಡಿ ಸುಪ್ರಂಕೋರ್ಟಿಗೆ ವರದಿ ಕೊಟ್ಟಿದ್ದರು. ಎಷ್ಟು ನಷ್ಟವಾಗಿದೆ ಅದರ 5 ಪಟ್ಟು ಯಾರ್ಯಾರು, ಎಷ್ಟೆಷ್ಟು ಕದ್ದಿದ್ದಾರೆ, ಅವರು ರಾಜಕಾರಣಿಗಳಿರಬಹುದು, ಅಧಿಕಾರಿಗಳಿರಬಹುದು ಅಥವಾ ಇನ್ಯಾರೇ ಕಾರಣರಿರಬಹುದು, export company ಯವರು ಇರಬಹುದು, Mining company ಯವರು ಇರಬಹುದು. ಹೀಗೆ ಯಾರ್ಯಾರು ಕಾರಣರಾಗಿದ್ದಾರೆ, ಅವರೆಲ್ಲರ ಹತ್ತಿರವೂ ಐದು ಪಟ್ಟು ವಸೂಲು ಮಾಡಬೇಕು. ಮಾನ್ಯ ಅಧ್ಯಕ್ಷರೆ, 16 ಸಾವಿರದ 85 ಕೋಟಿಗೆ 5 ಪಟ್ಟು ಎಂದರೆ ಎಷ್ಟಾಯಿತು. ಸುಮಾರು 80 ಸಾವಿರ ಕೋಟಿ. ಸರ್ಕಾರದ ಖಜಾನೆಗೆ ಬಂದರೆ ಏನಾಗುತ್ತಿತ್ತು ಸ್ವಾಮಿ? ಪಾಪ, ಈ ಬಸವರಾಜು ರವರು ದುಡ್ಡು ಇಲ್ಲ, 17 ಸಾವಿರ ಕೋಟಿಯನ್ನು 7 ವರ್ಷದಲ್ಲಿ ಮುಗಿಸಿಬಿಡಬಹುದು ಎಲ್ಲವನ್ನೂ. ನೀರಾವರಿ, ಕುಡಿಯುವ ನೀರು, ರಸ್ತೆ ಎಲ್ಲಾ ಮುಗಿದು ಹೋಗುತ್ತಿತ್ತಲ್ಲ, ಬಿಟ್ಟು ಬಿಟ್ರಲ್ಲಾ ಈಗ. ಇದನ್ನು ವಸೂಲಿ ಮಾಡಬೇಕಲ್ಲ? 6 ತಿಂಗಳಾಯಿತು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡರು. ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಂಡರು, ಯಾರ್ಯಾರ ಬಳಿ ವಸೂಲಿ ಮಾಡಬೇಕೆಂದರು, ಅವರ ಮೇಲೆ ಏನು ಕ್ರಮ ತೆಗೆದುಕೊಂಡರು, ಯಾರ್ಯಾರ licence ರದ್ದು ಮಾಡಬೇಕೆಂದಿದ್ದರು, ಅದು ಏನಾಯಿತು? ವಿನೋದ್ ಗೋಯಲ್ ಎಂದು ಒಬ್ಬ ಇದ್ದಾನೆ. ಅವನು forgery document submit ಮಾಡಿ Mining License renewal ಮಾಡಿಸಿಕೊಂಡಿದ್ದಾನೆ. ಅವನ ಮೇಲೆ ಈವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? It is a criminal offence. Has he been arrested so far? ಸರ್ಕಾರಕ್ಕೆ ಆದ ನಷ್ಟವನ್ನು ವಸೂಲಿ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ? Collapse of administration in Bellary, the Republic of Bellary ಎಂದು ಲೋಕಾಯುಕ್ತರು ಹೇಳಿದ್ದಾರೆ.

ಅಧ್ಯಕ್ಷರು:- Facts ಆಮೇಲೆ ಹೇಳೋಣ.

ಶ್ರೀ ಸಿದ್ದರಾಮಯ್ಯ:- ಇದು facts ಹೇಳುವುದಲ್ಲ. ಬೇರೆ ಏನೂ ಹೇಳದೆ ಸುಮ್ಮನೆ ಒಂದು sentence ಹೇಳಿ ಕುಳಿತುಕೊಂಡು ಬಿಡಲೇನು?

ನಿಮಗೆ ಮಾಹಿತಿ ಸಿಗಬೇಕೋ, ಬೇಡವೋ? ನಿಮಗೆಲ್ಲಾ seriousness ಅರ್ಥ ಆಗಬೇಕೋ, ಬೇಡವೋ? ಮುಖ್ಯಮಂತ್ರಿಗಳಿಗೆ seriousness ಅರ್ಥ ಆಗಬೇಕಲ್ಲ? ನಿಮ್ಮ ಸರ್ಕಾರಕ್ಕೆ ಒಳ್ಳೆಯದಾಗಲಿ ಎಂದೇ ಮಾಡುತ್ತಿದ್ದೇವೆ. ಎಲ್ಲವನ್ನೂ ವಸೂಲಿ ಮಾಡಿ ನಿಮ್ಮ ಸರ್ಕಾರಕ್ಕೆ ದುಡ್ಡು ಬರಲಿ ಎಂದೇ ಮಾಡುತ್ತಿದ್ದೇವೆ.

ಅಧ್ಯಕ್ಷರು:– ಸಾಕಷ್ಟು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ:– ಆಯಿತು, ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಕಾರಣಕ್ಕೋಸ್ಕರ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡರು, 24 ದಿನ ಜೈಲಿಗೆ ಹೋಗಬೇಕಾಗಿ ಬಂತು. ಈ ಕಾರಣಕ್ಕೋಸ್ಕರ ಜನಾರ್ಧನ ರೆಡ್ಡಿಯವರು ಜೈಲಿಗೆ ಹೋದರು. ಈ ಕಾರಣಕ್ಕೋಸ್ಕರ ಬೇರೆ ಬೇರೆಯವರೆಲ್ಲಾ ಜೈಲಿಗೆ ಹೋಗಬೇಕಿತ್ತು. ಹೋಗಿಲ್ಲ. ಆ ಕಾರಣಕ್ಕೆ ನಾನೇನು ಹೇಳುತ್ತೇನೆಂದರೆ ಸರ್ಕಾರದಲ್ಲಿ ಇದರ ಬಗ್ಗೆ ತೀವ್ರತೆ ಕಾಣುತ್ತಿಲ್ಲ. ಯಾರನ್ನೋ ರಕ್ಷಣೆ ಮಾಡುವುದಕ್ಕಾಗಿ ವಿಳಂಬ ಮಾಡುತ್ತಿರುವುದು. ಲೋಕಾಯುಕ್ತ ಅವರು 6 ತಿಂಗಳು ಇಲ್ಲದಿರುವುದರಿಂದ ಎಲ್ಲಾ ಕಡೆ B-report ಆಗಿ ಹೋದವು. ಲೋಕಾಯುಕ್ತರು ಇದ್ದಿದ್ದರೆ ಹೀಗಾಗಲು ಸಾಧ್ಯವೇ ಇರುತ್ತಿರಲಿಲ್ಲ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ಇದು ರಾಜ್ಯದ ಬೊಕ್ಕಸಕ್ಕೆ ನಷ್ಟ ಆಗಿರುವುದು, ಲೂಟಿ ಆಗಿರುವುದು. ಇಂದು ನಮ್ಮ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಬಿಟ್ಟಿದ್ದಾರೆ. OMC ಎಂಬ ಕಂಪನಿಗೆ license ಇರುವುದು ಆಂಧ್ರದಲ್ಲಿ, ಅದರ ಗಣಿಗಾರಿಕೆ ಮಾಡಿರುವುದು ಕರ್ನಾಟಕದಲ್ಲಿ. ನಮ್ಮ ಸುಗ್ಲಮ್ಮ ದೇವಸ್ಥಾನವನ್ನು ಒಡೆದು ಹಾಕಿ, ನಮ್ಮ ಅರಣ್ಯ ಪ್ರದೇಶವನ್ನೇ ಆಂಧ್ರಪ್ರದೇಶಕ್ಕೆ ಸೇರಿಸಿ ಬಿಟ್ಟಿದ್ದಾರಲ್ಲ, ಇವರಿಗೆ ಏನೆಂದು ಕರೆಯಬೇಕು ಮಾನ್ಯ ಅಧ್ಯಕ್ಷರೆ? ಇವರನ್ನು ಕರ್ನಾಟಕದವರೆಂದು ಕರೆಯಬೇಕಾ? ಯಾವ ಭಾಷೆ ಉಪಯೋಗಿಸಬೇಕು ಇವರಿಗೆ? ಗಡಿರೇಖೆಯನ್ನೇ ಬದಲಿಸಿ ಆ ಕಡೆ ಕಲ್ಲು ಕಿತ್ತು ಹಾಕಿ ಬಿಟ್ಟಿದ್ದಾರೆ. ನಮ್ಮ ಕಡೆ ಹೊಲ ಉಳುವಾಗ ಅಕ್ಕ ಪಕ್ಕಕ್ಕೆ ಕಿತ್ತು ಹಾಕುವುದು ಮಾಡುತ್ತಿದ್ದ ಹಾಗೆ

ಜಗಳವಾಡುವುದು ಮಾಡುತ್ತಿದ್ದ ಹಾಗೆ ಮಾಡಿದ್ದಾರೆ. ಇದನ್ನು ಯಾರೂ ಕೂಡ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. Forest Minister ಮುಖ ತೋರಿಸಿ ಹೊರಟು ಹೋದರು. ಮೊನ್ನೆ ಅವರು ಸಂಡೂರು ತಾಲ್ಲೂಕು, ರಾಮಘಡಕ್ಕೆ ಹೋಗಿದ್ದರು. ನನ್ನ ಎದುರಿಗೆ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು statement ಕೊಟ್ಟು ಬಿಟ್ಟಿದ್ದಾರೆ ಪಾಪ. Forest Minister ಯೋಗೇಶ್ವರ್ ಅವರು ಮೊನ್ನೆ ಒಂದು ತಿಂಗಳ ಹಿಂದೆ ಬಳ್ಳಾರಿಗೆ ಹೋಗಿ ಬಂದಿದ್ದಾರೆ. 10 ಲಾರಿಗಳನ್ನು ಹಿಡಿದಿದ್ದಾರೆ. ಈಗಲೂ ಕೂಡ ಲಾರಿಗಳು ಓಡಾಡುತ್ತಲೇ ಇವೆ. ಅದಕ್ಕೆಲ್ಲಾ fine ಹಾಕಿದ್ದೇವೆಂದು ಹೇಳಿದ್ದಾರೆ. ಅಂದರೆ ಅಕ್ರಮ ಗಣಿಗಾರಿಕೆ ನಡೆಯುತ್ತಲೇ ಇದೆ ಎಂದು ಆಯಿತಲ್ಲಾ? ಸರ್ಕಾರ ಏಕೆ ಸುಮ್ಮನೆ ಕುಳಿತು ಮೌನವಾಗಿ ತನ್ನ ಅಸಹಾಯಕತೆ ತೋರಿಸುತ್ತಿದೆ? ಆದುದರಿಂದ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸುದೀರ್ಘ ಚರ್ಚೆ ಆಗಬೇಕು. ರಾಜ್ಯದ ಜನತೆಗೆ ಏನಾಗಿದೆ ಎಂದು ತಿಳಿಯಬೇಕು. ಲೋಕಾಯುಕ್ತ ಸಂತೋಷ್ ಹೆಗ್ಡೆಯವರು retire ಆಗಿದ್ದಾರೆ. ಈ ಸರ್ಕಾರ ಏನೂ ಮಾಡಿಲ್ಲ, ನನ್ನ ವರದಿಯನ್ನು ಕಸದ ಬುಟ್ಟಿಗೆ ಹಾಕಿದರು ಎಂದು ಅವರು ಹೇಳುತ್ತಲೇ ಇರುತ್ತಾರೆ. ಆದ್ದರಿಂದ ದಯವಿಟ್ಟು ಈ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಬೇಕು. Rule 60 ರಲ್ಲಿ ಚರ್ಚೆಯಾದರೆ ಹೆಚ್ಚು ಮಹತ್ವ ಬರುವುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನನ್ನ submission.

ಶ್ರೀ ಎಸ್.ಎ. ರಾಮದಾಸ್:– ಹೊಸ ಸಂಪ್ರದಾಯ ಆಗುವುದು ಬೇಡ ಎಂದು ಹೇಳುತ್ತೇನೆ. Governor ಅವರಿಗೆ vote of thanks ಹೇಳುವ ಸಂದರ್ಭದಲ್ಲಿ ಹಿಂದೆ ನಮ್ಮ ಸದನದಲ್ಲಿ ನಡೆದಿರುವ ವಿಚಾರಗಳನ್ನು ನಿಮ್ಮ ಮುಂದೆ ವ್ಯಕ್ತಪಡಿಸುತ್ತೇನೆ. ಆ ನಂತರದಲ್ಲಿ ತಮ್ಮ Ruling ಕೊಟ್ಟ ಮೇಲೆ ಹೌದು, ಇಲ್ಲಿ ಅವಕಾಶ ಇದೆ ಎನ್ನುವುದಾದರೆ ಮುಂದಿನ ಚರ್ಚೆಗೆ ಅವಕಾಶ ಕೊಡಿ. The Motion of Adjournment on a matter of urgent public interest ಇದರಲ್ಲಿ 533ನೇ page ನಲ್ಲಿ ಒಂದು ವಿಚಾರವಿದೆ. Adjournment Motion are not normally

allowed during the Budget Session or during the discussion on motion of thanks to the Governor ಅಂತ ಇದೆ. ಇದರ ಜೊತೆಯಲ್ಲಿಯೇ ಇದಕ್ಕೆ ಸಂಬಂಧಪಟ್ಟಂತೆ 2ನೇ ಸದನದಲ್ಲಿ ಆದ ಎರಡು ruling ಇದೆ. ಅದನ್ನು ನಾನು ಸದನದಲ್ಲಿ ನಿಮ್ಮ ಮುಂದೆ ಹೇಳಲು ಬಯಸುತ್ತೇನೆ. ಮೊದಲನೆಯದು, 1970 ರ ಡಿಸೆಂಬರ್ 24ನೇ ತಾರೀಖು ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಕೊಟ್ಟಿದ್ದಾರೆ. ಕೊನೆಯ para ಒಂದನ್ನು ಓದುತ್ತೇನೆ.

ಶ್ರೀ ಸಿದ್ದರಾಮಯ್ಯ:– ಚರ್ಚೆ ಬೇಕೋ, ಬೇಡವೋ?

ಶ್ರೀ ಎಸ್.ಎ. ರಾಮದಾಸ್:– ಚರ್ಚೆ ಬೇಕು.

ಶ್ರೀ ಸಿದ್ದರಾಮಯ್ಯ:– ಮಾಡಿ ಮತ್ತೆ.

ಶ್ರೀ ಎಸ್.ಎ. ರಾಮದಾಸ್:– ಚರ್ಚೆ ಬೇಕು. ಆದರೆ ಈ Motion ನಲ್ಲಿ ಮಾಡಲಿಕ್ಕೆ ಸಾಧ್ಯ ಇಲ್ಲ ಎನ್ನುವಂಥಾದ್ದು. ಡಿಸೆಂಬರ್ 24ನೇ ತಾರೀಖು 1970 ರಲ್ಲಿ ಇದೇ ಸ್ಥಳದಲ್ಲಿ ಅಂದರೆ ಈ House ನಲ್ಲೇ ಒಂದು resolution ಅನ್ನು ಕೊಟ್ಟಿದ್ದಾರೆ. ಅದರ ಜೊತೆಗೆ Judgement pass ಮಾಡಿದ್ದಾರೆ. ಅದರ ಪ್ರಕಾರ ಯಾವುದೇ ಕಾರಣಕ್ಕೂ Governor address ನಡೆಯುವ ಸಂದರ್ಭದಲ್ಲಿ ಇದನ್ನು ಯಾವುದೇ Motion ಮೂಲಕವಾಗಿ Motion ಅನ್ನು move ಮಾಡಬಾರದು, because we have other opportunities to discuss ಎನ್ನುವಂತಹದ್ದು. ಅದರ ಜೊತೆಯಲ್ಲಿ 1956 ರಲ್ಲಿ ಡಿಸೆಂಬರ್‌ನಲ್ಲಿ ನಡೆದಿರುವಂಥ ವಿಚಾರ ಏನಿದೆ, ಇವೆರಡನ್ನೂ ಕೂಡಾ quote ಮಾಡುತ್ತಾ ಯಾವುದೇ ಕಾರಣಕ್ಕೂ Governor ಗೆ thanks ಹೇಳುವ ಸಂದರ್ಭದಲ್ಲಿ motion ಮೂಲಕ ತರಬಾರದು ಎಂಬ ವಿಚಾರ ನಿಮ್ಮ ಮುಂದೆ ಇದೆ. ಹಾಗಾಗಿ ಬೇರೆ ಯಾವುದೇ ರೀತಿಯಲ್ಲಿ Governor address ನಲ್ಲಿ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಲು ಅವಕಾಶ ಇದೆಯೇ ಹೊರತು ಈ ಒಂದು ಸಂದರ್ಭದಲ್ಲಿ vote of thanks ಹೇಳುವ ಸಂದರ್ಭದಲ್ಲಿ ತರಲು ಸಾಧ್ಯವಿಲ್ಲ

ಎಂದು ನನ್ನ ಕಡೆಯಿಂದ ತಮ್ಮ ಮೂಲಕ ಹರಕೆಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:- ನಾನು ಯಾವುದೇ ವಿಚಾರವನ್ನು ಹೆಚ್ಚು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. 5 ವರ್ಷಕ್ಕೊಂದು ಸಾರಿ ಸರ್ಕಾರಗಳು ಬದಲಾಗುತ್ತವೆ, 5 ವರ್ಷಕ್ಕೊಂದು ಸಾರಿ ಚುನಾವಣೆ ಬರುತ್ತವೆ ಮಾನ್ಯ ಸುರೇಶ್ ಕುಮಾರ್ ರವರೆ, 2008 ರಲ್ಲಿ ಲೋಕಾಯುಕ್ತರ ಮುಂದೆ ಇದನ್ನು ಪ್ರಸ್ತಾಪ ಮಾಡಿ 2008 ರಲ್ಲಿ ಒಂದು ವರದಿ ಬರುತ್ತದೆ. 2011 ರಲ್ಲಿ ಒಂದು ವರದಿ ಬರುತ್ತದೆ. ಎರಡೂ ವರದಿ ಬಂದ ಮೇಲೆ ಅದು ಲೋಕಾಯುಕ್ತ ಆಕ್ಟ್ ಪ್ರಕಾರ ವರದಿ ಬರುತ್ತದಲ್ಲಾ, ಅದನ್ನು ಮೂರು ತಿಂಗಳೊಳಗಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿಯವರೆಗೆ ಎರಡೂ ವರದಿ ಬಂದಿವೆ. ಒಂದು ವರದಿ ಬಂದು ಆಗಲೇ ಎರಡು ವರ್ಷ ಆಯಿತು. ಇನ್ನು ಮುಂದಿನ ವರ್ಷ ನಾವು ಚುನಾವಣೆಗೆ ಹೋಗುತ್ತಿದ್ದೇವೆ. ಎರಡನೇ ವರದಿ ಬಂದು ಈಗ ಆರು ತಿಂಗಳು ಆಯಿತು. ಮೂರು ತಿಂಗಳಾದರೂ ಕೂಡ ಯಾವುದೇ ತರಹದ ಕ್ರಮ ತೆಗೆದುಕೊಳ್ಳಲಿಲ್ಲ. ಸರ್ಕಾರದಿಂದ ಏನು ಲೋಪ ಆಗಿದೆ ಅಂದರೆ ನಿಮ್ಮ ಲೋಕಾಯುಕ್ತ ಆಕ್ಟ್ ಪ್ರಕಾರ ಸೆಕ್ಷನ್ 12(4) ಪ್ರಕಾರ ಮೂರು ತಿಂಗಳೊಳಗೆ ವರದಿ ಕೊಡಬೇಕು. ಆದರೆ ಲೋಕಾಯುಕ್ತ ವರದಿ ಏನಾಗಿದೆ? ನಮಗೆ ಪತ್ರಿಕೆಯಲ್ಲಿ ಬಂದಿರತಕ್ಕಂತಹದ್ದು, ಮಾಧ್ಯಮದಲ್ಲಿ ತಿಳಿದುಕೊಂಡಿರತಕ್ಕಂತಹದ್ದು ನೀವು ವರದಿಯನ್ನು ಲೋಕಾಯುಕ್ತಕ್ಕೆ ವಾಪಸ್ ಕಳುಹಿಸಿದ್ದೀರಿ ಎಂದು. ವರದಿಯನ್ನು ವಾಪಸ್ ಕಳುಹಿಸಲು ಆಕ್ಟ್‌ನಲ್ಲಿ ನಿಮಗೆ ಅಧಿಕಾರವೇ ಇಲ್ಲ. ಕಳುಹಿಸುವುದಕ್ಕೆ ಬರುವುದೇ ಇಲ್ಲ. ಅದನ್ನು ವಾಪಸ್ ಕಳುಹಿಸಿದ್ದೇವೆ ಎಂದರೆ ಹೇಗೆ ಹೇಳುತ್ತೀರಿ? ಇದು ಒಂದು ಕಡೆ. ಎರಡನೇಯದು ಲೋಕಾಯುಕ್ತರ ಹುದ್ದೆ. ಬಹಳ ತಿಂಗಳುಗಳಿಂದಲೂ ಖಾಲಿ ಇದೆ. ಯಾವ ಕಾರಣಕ್ಕೋಸ್ಕರ ಖಾಲಿ ಇದೆ? ಅದು ಯಾವುದೇ ಹಂತದಲ್ಲಿದ್ದರೂ ಕೂಡ ನಮಗೆ ಇರತಕ್ಕಂತಹದ್ದು ಐದು ವರ್ಷದ

ಅಧಿಕಾರ. ಮುಂದಿನ ವರ್ಷ ನಾವು ಚುನಾವಣೆಗೆ ಹೋಗಬೇಕಾದಂತಹ ಅನಿವಾರ್ಯತೆ ಇರುವಂತಹ ಸಂದರ್ಭದಲ್ಲಿ ಒಂದು ಲೋಕಾಯುಕ್ತ ವರದಿ ಕೊಟ್ಟಿರತಕ್ಕಂತಹದ್ದು ಒಂದು ದೊಡ್ಡ ವರದಿ. ಇಡೀ ದೇಶದಲ್ಲಿ ಇವತ್ತು ಅಕ್ರಮ ಗಣಿಗಾರಿಕೆ ಬಗ್ಗೆ ಕೊಟ್ಟಂತಹ ವರದಿ. ಅದೊಂದು ಬಹು ದೊಡ್ಡ ವರದಿ ಆಗಿದೆ. ಸರ್ಕಾರದ ಬೊಕ್ಕಸಕ್ಕೆ 12,228 ಕೋಟಿ ರೂಪಾಯಿಗಳಷ್ಟು ನಷ್ಟ ಆಗಿದೆ ಎಂದು ವರದಿ ಕೊಟ್ಟ ಹಿನ್ನೆಲೆಯಲ್ಲಿ ಸರ್ಕಾರ ಯಾವುದೇ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರೆ ಇದು ಯಾರ ತಪ್ಪು? ನೀವು ಹೇಳುತ್ತೀರಿ, ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತೀರಿ. ನಾವು ಒಂದು High Power Committee ಮಾಡಿದ್ದೇವೆ ಎಂದು ಹೇಳುತ್ತೀರಿ. High Power Committee ಮಾಡಿದರೆ ಅವರೊಂದು ವರದಿ ಕೊಟ್ಟರು. That is all administrative action. ಅದನ್ನು ನೀವು ಸಮರ್ಥನೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ಕಡೆ ಇವತ್ತು ಲೋಕಾಯುಕ್ತರ ಹುದ್ದೆಯನ್ನು ತುಂಬತಕ್ಕ ಕೆಲಸವನ್ನು ಮಾಡಿಲ್ಲ. ಮತ್ತೆ ಅನಗತ್ಯವಾಗಿ ನಿಮಗೆ ಅವಕಾಶ ಇಲ್ಲದೇ ಇದ್ದರೂ ಕೂಡ, ಕಾನೂನು ವಿರೋಧವಾಗಿ ವಾಪಸ್ ಕಳುಹಿಸತಕ್ಕಂತಹ ಕೆಲಸವನ್ನು ಇವತ್ತು ನೀವು ಮಾಡಿದ್ದೀರಿ ಎಂದರೆ ಬಹುಶಃ ನೀವು ಎಲ್ಲೋ ಒಂದು ಕಡೆಗೆ ಈ ತಪ್ಪನ್ನು ಮುಚ್ಚಿ ಹಾಕತಕ್ಕಂತಹ ಹುನ್ನಾರ ನಿಮ್ಮಲ್ಲಿ ನಡೆದಿದೆ ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಅದಕ್ಕೋಸ್ಕರ ದಯಮಾಡಿ ಇದನ್ನು ನಿಯಮ 60ರ ಅಡಿಯಲ್ಲಿ ಇದು ಚರ್ಚೆ ಆದಂತಹ ಸಂದರ್ಭದಲ್ಲಿ ಇವತ್ತು ಅಕ್ರಮ ಗಣಿಗಾರಿಕೆ ವಿಚಾರ ಇಡೀ ದೇಶದಲ್ಲಿ ಲೋಕಾಯುಕ್ತರು ಕೊಟ್ಟಂತಹ ವರದಿಯ ಮೇಲೆ ಸಾಕಷ್ಟು ಚರ್ಚೆ ಆಗಿರಬೇಕಾದಾಗ ಆ ಚರ್ಚೆಯ ಫಲಿತಾಂಶ ಏನಾಯಿತು? ಆ ಚರ್ಚೆಯಿಂದ ರಾಜ್ಯಕ್ಕೆ ಏನು ಲಾಭ ಆಯಿತು? ಜನ ಸಾಮಾನ್ಯರು ಮೇಲೆ ಕುಳಿತಿರುವವರನ್ನು ಹೋಗಿ ಕೇಳುತ್ತಾರೆ. ಇಷ್ಟೆಲ್ಲಾ ಆಯಿತು. ನಾಲ್ಕು ವರ್ಷದಿಂದ ಕಾಯುತ್ತಿದ್ದೇವೆ, ಏನು ಪ್ರಯೋಜನ ಆಯಿತು ಎಂದು ಕೇಳಿದರೆ ನಾವೇನು ಉತ್ತರವನ್ನು ಹೇಳಬೇಕು.

ಅಧ್ಯಕ್ಷರು:– Facts ಬೇಡ. They come under the provisions of the Act.

ಶ್ರೀ ಟಿ.ಬಿ. ಜಯಚಂದ್ರ:– ನಾನು Facts ಗೆ ಹೋಗಲೇ ಇಲ್ಲ. It is a question of point of law.

ಅಧ್ಯಕ್ಷರು:– How it is within the purview of the law ಎಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– It is a point of law. ಒಂದು ಕಡೆ ಲೋಕಾಯುಕ್ತ ಹುದ್ದೆ ಭರ್ತಿ ಆಗಿಲ್ಲ. ಇನ್ನೊಂದು ಕಡೆ ನಿಮ್ಮ ಅಧಿಕಾರಿಗಳು

ಅಧ್ಯಕ್ಷರು:– No, no., all these are within Rule 60 ಅಷ್ಟೇ.

ಶ್ರೀ ಟಿ.ಬಿ. ಜಯಚಂದ್ರ:– ಇನ್ನೊಂದು ವಿಚಾರ, private complaint ಹಾಕಿ, private complaint ನವರು ಕೋರ್ಟಿಗೆ ಹೋಗಿ

Mr. SPEAKER:- That is a different issue.

ಶ್ರೀ ಟಿ.ಬಿ. ಜಯಚಂದ್ರ:– ಸರ್ಕಾರದ ಬೊಕ್ಕಸಕ್ಕೆ ಇಷ್ಟೊಂದು ನಷ್ಟ ಆಗಿರಬೇಕಾದರೆ ನೀವ್ಯಾಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರ ಮೇಲೆ criminal action ಏಕೆ ತೆಗೆದುಕೊಳ್ಳುತ್ತಿಲ್ಲ? Property recovery ಮಾಡತಕ್ಕ ಕೆಲಸ ಏಕೆ ಆಗುತ್ತಿಲ್ಲ ಎನ್ನತಕ್ಕ ವಿಚಾರವನ್ನು ನಿಯಮ 60ರ ಅಡಿಯಲ್ಲಿ ಚರ್ಚೆ ಆದರೆ ಮಾತ್ರ ಅದಕ್ಕೆ ಬೆಲೆ ಬರುತ್ತದೆ ಎನ್ನತಕ್ಕದ್ದನ್ನು ತಿಳಿದುಕೊಳ್ಳಬೇಕು. ಇಡೀ ದೇಶದಲ್ಲಿ ನೋಡುತ್ತಿದ್ದಾರೆ. ಸಂತೋಷ್ ಹೆಗ್ಡೆ, ಲೋಕಾಯುಕ್ತರು ಕೊಟ್ಟಂತಹ ವರದಿಯ ಹಿನ್ನೆಯಲ್ಲಿ ಕರ್ನಾಟಕ ಸರ್ಕಾರದಲ್ಲಿ, ವಿಧಾನಸಭೆ ನಡೆಯುತ್ತಿದೆ, ಚರ್ಚೆ ಆಗುತ್ತಿದೆ. ಏನಾಗುತ್ತಿದೆ ಎಂದು ದೇಶದ ಜನ ನೋಡುವಂತಹ ಸಂದರ್ಭದಲ್ಲಿ ನಾವು ಕೇವಲ ಇದನ್ನು ಬರೀ ಚರ್ಚೆಗೆ ಇಟ್ಟುಕೊಂಡು ನಾವು ಆ action ತೆಗೆದುಕೊಂಡಿದ್ದೇವೆ, ಈ ಆಕ್ಷನ್ ತೆಗೆದುಕೊಂಡಿದ್ದೇವೆ ಎಂದು ಹೇಳಿ ಸಬೂಬು ಉತ್ತರ ಹೇಳುವುದಕ್ಕಿಂತ ಹೆಚ್ಚಾಗಿ ಇವತ್ತು ನಿರ್ದಿಷ್ಟವಾಗಿರತಕ್ಕಂತಹ ಕ್ರಮವನ್ನು ತೆಗೆದುಕೊಳ್ಳತಕ್ಕಂತಹ ಕೆಲಸ

ಸರ್ಕಾರದಿಂದ ಆಗಬೇಕಾಗಿದೆ. ಅದಕ್ಕೋಸ್ಕರ ಸರ್ಕಾರವೇ ಏಕೋ ಸ್ವಲ್ಪ ನಿಧಾನದ ಧೋರಣೆ ಇರುವುದರಿಂದ ಸರ್ಕಾರಕ್ಕೆ ಕಿವಿ ಹಿಂಡುವಂತಹ ಕೆಲಸವನ್ನು ಮಾಡಬೇಕಾದಾಗ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಎತ್ತಿಕೊಳ್ಳಬೇಕು, ಚರ್ಚೆ ಮಾಡಬೇಕು ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು:– ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದಾಸ್ ಅವರು ಹೇಳುವುದು ಆ ಮುಲ್ಕಾ ಗೋವಿಂದ ರೆಡ್ಡಿಯವರು ಒಂದು Adjournment Motion ಕೊಡುತ್ತಾರೆ, food grains ಬೆಲೆ ಹೆಚ್ಚಾಗುವ ಬಗ್ಗೆ. ರಾಜ್ಯಪಾಲರ ಭಾಷಣ ಇದೆಯಲ್ಲಾ, ಅದರಲ್ಲಿ ಹೇಳಿ ಎಂದು orders ಮಾಡಿದ್ದಾರೆ ಅಷ್ಟೇ. ರಾಜ್ಯಪಾಲರ ಭಾಷಣ, ಮತ್ತು there are other ventilations, ಅದರಲ್ಲಿ ಮಾಡಿ adjournment motion ಮೂಲಕ ಬೇಡ ಎಂದು ಹೇಳುತ್ತಾರೆ. ಇದು ಬಹಳ ಮಹತ್ವವಾದಂತಹದು. ರಾಜ್ಯಕ್ಕೆ ಸುಮಾರು ಸಾವಿರಾರು ಕೋಟಿ ನಷ್ಟ ಆಗಿರತಕ್ಕದ್ದು. ಸಾವಿರಾರು ಜನ involve ಆಗಿರತಕ್ಕಂತಹದ್ದು, ಲೂಟಿ ಹೊಡೆದಿರತಕ್ಕಂತಹದ್ದು. ಇಂತಹ ವಿಚಾರವನ್ನು ಬೇರೆ ರೂಪದಲ್ಲಿ Governor's address ಇದೆ, ಬೇಡ, ಮಾಡಬಾರದು ಎಂದು ಹೇಳಿದರೆ ರಾಜ್ಯದ ಜನ ನಮಗೆ ಏನನ್ನುತ್ತಾರೆ? ಸದನದ ಮೇಲೆ ನಮ್ಮೆಲ್ಲರ ಮೇಲೆ reflect ಆಗುತ್ತದೆ. ಆ ಕಾರಣದಿಂದ this is a very very important matter, very urgent matter. ಇದು ಹಿಂದೆಯೇ ಚರ್ಚೆ ಆಗಬೇಕಾಗಿತ್ತು. ಏಕೆಂದರೆ ಅಸೆಂಬ್ಲಿ ಕರೆಯಲಿಲ್ಲ, ಹಾಗಾಗಿ ಕಳೆದ ಸಾರಿ ನಮಗೆ ಅವಕಾಶ ಆಗಲಿಲ್ಲ. ಆದ್ದರಿಂದ ನಾವು ಚರ್ಚೆ ಮಾಡದೇ ಹೋದರೆ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಆ ಕಾರಣಕ್ಕೋಸ್ಕರ ಇದನ್ನು Rule 60ರಲ್ಲಿಯೇ ತೆಗೆದುಕೊಳ್ಳಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕು. ನನಗೆ ಡೀಟೇಲ್ ಆಗಿ ಇದನ್ನೆಲ್ಲಾ ಹೇಳಲಿಕ್ಕೆ ಅವಕಾಶ ಕೊಡಬೇಕು. ಏಕೆಂದರೆ preliminary submission ನಲ್ಲಿ ಎಲ್ಲವನ್ನೂ ಕೂಡ ಹೇಳುವುದಕ್ಕೆ

ಆಗುವುದಿಲ್ಲ. I have gone through the points. ಆದ್ದರಿಂದ ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿ ಪಕ್ಷದ ನಾಯಕರು, ಪ್ರತಿ ಪಕ್ಷದ ಉಪ ನಾಯಕರು ಹೇಳಿದ್ದೆಲ್ಲವನ್ನೂ ಕೂಡ ನಾವು ಆಲಿಸಿದ್ದೇವೆ. ಬಹಳ ಮಹತ್ವದ ವಿಚಾರ, ಲೋಕಾಯುಕ್ತದ ಎರಡು ಪರದಿಗಳು, ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಿದ್ದಾರೆ. ಅದನ್ನೆಲ್ಲಾ ನಾವೇನು ಕ್ರಮ ತೆಗೆದುಕೊಂಡಿದ್ದೇವೆ ಎಂದು ತಿಳಿಸುತ್ತೇವೆ. ಆದರೆ ಮೂಲಭೂತವಾಗಿ submission ಮಾಡಿದಾಗ ಈ ಒಂದು ವಿಷಯ ನಿಲುವಳಿ ಸೂಚನೆ ಅಡಿ ಯಾವ ರೀತಿ ಬರುತ್ತದೆ, Adjournment Motion ಅಡಿ ಯಾವ ರೀತಿ ಬರುತ್ತದೆ? Rule 60ರ ಅಡಿ ಯಾವ ರೀತಿಯಲ್ಲಿ ಬರುತ್ತದೆ ಎನ್ನುವ ವಾದವನ್ನು ಅವರು ತಮ್ಮ ಮುಂದೆ ಮಂಡಿಸಬೇಕು. ಆದರೆ ಅನೇಕ ಸಂಗತಿಗಳನ್ನು ಅವರು ಹೇಳುವವರು ಇದ್ದಾರೆ. ಬಹಳ ಮುಖ್ಯವಾಗಿ ಈ ಅಂಶಕ್ಕೆ ಅವರ 30 ನಿಮಿಷಗಳ ಮಾತಿನಲ್ಲಿ ಉತ್ತರ ಸಿಕ್ಕಿಲ್ಲ. ಏನೂ ಸಿಕ್ಕಿಲ್ಲ, Rule 60ರಲ್ಲಿ, "Subject to the provisions of these Rules a Motion for an Adjournment of the business of the House for the purpose of discussing a definite matter of urgent public importance will be made with the consent of the Speaker" ನಿಯಮ 62 ರಲ್ಲಿ "The right to move the Motion for adjournment of the House for the purpose of discussing a definite matter of urgent public importance shall be subject to the following restriction, namely; the motion shall be restricted to a specific matter of recent occurrence". ನಿನ್ನೆ ಆಗಿದೆಯಾ, ಕಳೆದ ವಾರ ಆಗಿದೆಯಾ? 2011ರ ಅಗಸ್ಟ್ ಬಗ್ಗೆ ಇವರು ಹೇಳುತ್ತಿರುವುದು. It is not a matter of recent occurrence. Adjournment motion ಗೆ ಬಹಳ important ಇರುವುದು ಅದರಲ್ಲಿ ಅರ್ಜೆನ್ಸಿ ಇರಬೇಕು ಮತ್ತು recent

occurrence ಇರಬೇಕು. ಅದು ಯಾವುದೂ ಕೂಡ ಈ ಒಂದು ವಿಚಾರದಲ್ಲಿ ಬರುತ್ತಿಲ್ಲ. ಮಹತ್ವದ ವಿಚಾರ ಎನ್ನುವ ಬಗ್ಗೆ ನಾನೂ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆ ವಿಚಾರವನ್ನು ಅವರು ಪ್ರಸ್ತಾಪಿಸಲಿ. ಅವರು ಪ್ರಸ್ತಾಪಿಸಿದಾಗ ಸರ್ಕಾರದ ಕಡೆಯಿಂದ ನಾವೇನು ಕ್ರಮವನ್ನು ತೆಗೆದುಕೊಂಡಿದ್ದೇವೆ. Action taken report ನಮ್ಮ ಕಡೆಯಿಂದ ಏನಾಗಿದೆ? ನಾವೇನು ಲೋಕಾಯುಕ್ತವನ್ನು ಕೇಳಿದ್ದೇವೆ? Supreme Court ನ CEC ಮುಂದೆ ನಾವೇನು ಹೇಳಿದ್ದೇವೆ? ಅವರು ಹೇಳಿದ್ದನ್ನು ನಾವೇನು ಅಳವಡಿಸಿದ್ದೇವೆ, ಅದನ್ನೆಲ್ಲಾ ನಾವು ಹೇಳಿದ್ದೇವೆ. ಎರಡನೆಯದು, ಮಾನ್ಯ ಸ್ನೇಹಿತರಾದ, ಸಚಿವರಾದಂತಹ ರಾಮದಾಸ್ ಅವರು ಹೇಳಿದ ಹಾಗೆ Governor's address ಇರುವಾಗ ವಿಶಾಲವಾದ ವ್ಯಾಪ್ತಿ ಇದೆ. ಆಗ ಚರ್ಚೆ ಮಾಡಲಿ. ನಾವು ಕೂಡ ವಿಸ್ತಾರವಾದ ಒಂದು ಉತ್ತರವನ್ನು ಕೊಡುತ್ತೇವೆ. ದಯವಿಟ್ಟು ಇದು ಯಾವುದೇ ಕಾರಣಕ್ಕೂ ನಿಲುವಳಿ ಸೂಚನೆ ಅಡಿಯಲ್ಲಿ ಬರುವುದಿಲ್ಲ. ಮತ್ತೆ ಮತ್ತೆ ಇದನ್ನು ತಮ್ಮ ಗಮನಕ್ಕೆ ತರಲು ನನಗೂ ಕೂಡ ಇಷ್ಟವಾಗುವುದಿಲ್ಲ. ತಾವೇ ದಯವಿಟ್ಟು ಇದನ್ನು ತಳ್ಳಿ ಹಾಕಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಕಾನೂನು ಮಂತ್ರಿಗಳು ಇದು recent occurrence ಅಲ್ಲ ಎಂದು ಹೇಳುತ್ತಿದ್ದಾರೆ. ನಮಗೆ first opportunity ಯಾವುದು ಸ್ವಾಮಿ?

ಶ್ರೀ ಎಸ್. ಸುರೇಶ್ ಕುಮಾರ್:- Last December.

ಶ್ರೀ ಸಿದ್ದರಾಮಯ್ಯ:- Last session, last December. Last December, I have raised the issue. I could not get the time. House was adjourned. I requested the Chair and also the Government to extend for two more days. Extend ಮಾಡಿದರಾ ಹೇಳಿ ನೋಡೋಣ. Is it now a reasonable request I have made? It was a reasonable request. So, that was the first opportunity for me. This is the next opportunity. ಆದ್ದರಿಂದ ಎರಡು ತಿಂಗಳಾಗಿದೆ,

ಮೂರು ತಿಂಗಳಾಗಿದೆ, ಆರು ತಿಂಗಳಾಗಿದೆ ಎನ್ನತಕ್ಕದ್ದು it is not at all relevant. It is a recent occurrence. This is the first opportunity I am getting. Therefore, ಇದು recent occurrence, ಸಾರ್ವಜನಿಕ ಮಹತ್ವದ್ದು, ರಾಜ್ಯಕ್ಕೆ ಸಂಬಂಧಪಟ್ಟಿದ್ದು, ರಾಜ್ಯದ ಬೊಕ್ಕಸಕ್ಕೆ ಸಂಬಂಧಪಟ್ಟಿದ್ದು. ಇದು ಲೂಟಿ ಹೊಡೆದಿರುವವರಿಗೆ ಸಂಬಂಧಪಟ್ಟಿದ್ದು, ಕಳ್ಳರುಗಳಿಗೆ ಸಂಬಂಧಪಟ್ಟಿರುವುದು, ಜೈಲಿಗೆ ಹೋಗಬೇಕಾಗಿರುವವರಿಗೆ ಸಂಬಂಧಪಟ್ಟಿರುವುದು. ಆದ್ದರಿಂದ ಇದಕ್ಕಿಂತ ಮಹತ್ವದ ವಿಚಾರ ಬೇರೊಂದಿಲ್ಲ. ಈ ತರಹ ನೀವು ಹೇಳಿ ಬಿಟ್ಟರೆ ಜನ ನಿಮಗೆ ಏನನ್ನುತ್ತಾರೆ? ನೀವು ಬೆಂಗಳೂರು ಸಿಟಿಯವರು. ಮಾನ್ಯ ಸುರೇಶ್ ಕುಮಾರ್‌ರವರೆ, ಇಲ್ಲೆಲ್ಲಾ ಬಹಳ ಪ್ರಜ್ಞಾವಂತ ಮತದಾರರಿದ್ದಾರೆ. ಆದ್ದರಿಂದ ಹಾಗೆಲ್ಲಾ ಮಾಡುವುದಕ್ಕೆ ಹೋಗಬೇಡಿ. ಸುಮ್ಮನೆ ಚರ್ಚೆಗೆ ಒಪ್ಪಿಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ನಾನೊಂದು ಬಹಳ strange translation ನೋಡುತ್ತಿದ್ದೇನೆ. 'Recent occurrence' ಎಂದರೆ 'first opportunity' ಎಂದು ಅರ್ಥ. 'Recent occurrence' 'first opportunity' ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿದ್ದರಾಮಯ್ಯ:– ನಾನೇನು ಮಾಡಬೇಕಾಗಿತ್ತು? ಇವರು ವಿಧಾನ ಸಭೆ ಮುಂದುವರೆಸಲಿಲ್ಲ. ಹಾಗಿದ್ದಾಗ ನಾನು ಮಾನ್ಯ ಮುಖ್ಯಮಂತ್ರಿಗಳ ಕೊಠಡಿಯಲ್ಲಿ ಹೋಗಿ ಇದನ್ನು ಪ್ರಸ್ತಾಪ ಮಾಡಬೇಕಿತ್ತೇ?

ಶ್ರೀ ಎಸ್. ಸುರೇಶ್ ಕುಮಾರ್:– 'December ನಲ್ಲಿ ನಾನು ಪ್ರಯತ್ನ ಪಟ್ಟೆ. ಡಿಸೆಂಬರ್‌ನಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಜನವರಿಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ' ಎಂದು ಕೇಳುತ್ತಿದ್ದಾರೆ. ಇದು ಈ ಕಾನೂನಿನ ಅಡಿಯಲ್ಲಿ ಬರುವುದಿಲ್ಲ. ಯಾವುದೋ ಒಂದು ಅರ್ಥದಲ್ಲಿ ಬರಬಹುದು. ಇದು ಯಾವುದೇ ರೀತಿಯಿಂದ recent occurrence ವ್ಯಾಪ್ತಿಯಲ್ಲಿ ಬರುವುದಿಲ್ಲ. ಮಾನ್ಯ ಸಭಾಧ್ಯಕ್ಷರೆ, ನಾನು ಇದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ಇದನ್ನು ರೂಲ್ 60ರ ಅಡಿಯಲ್ಲಿ

ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯ ಸಂಪ್ರದಾಯವನ್ನು ಹಾಕಿದಂತಾಗುವುದಿಲ್ಲ. ದಯವಿಟ್ಟು ತಾವು ರೂಲಿಂಗ್ ಕೊಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, They are deliberately avoiding discussion under Rule 60. They are afraid of it.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ನಾವು ಈ ವಿಚಾರವನ್ನು ನಿಯಮ 60ರ ಅಡಿಯಲ್ಲಿ ಚರ್ಚೆಗೆ ಕೋರಿದ್ದಾಗ, ತಾವು ಅದನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು convert ಮಾಡು ಅವಕಾಶ ಮಾಡಿಕೊಟ್ಟಿದ್ದೀರಿ. ಈಗ ಸಾರಾಸಗಟಾಗಿ ಇದನ್ನು ರೂಲ್ 60ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೇ ಬರುವುದಿಲ್ಲವೆಂದರೆ ಏನರ್ಥ? ಹಿಂದೆ ಇದನ್ನೇ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ಮತ್ತೊಮ್ಮೆ ನಾನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತೇನೆ. ಆಗ ಸದನ ಮುಂದಕ್ಕೆ ಹೋಗಿದ್ದರಿಂದ, ಆ ವಿಚಾರದ ಬಗ್ಗೆ ಆಗ ನಮಗೆ ಚರ್ಚೆ ಮಾಡಲಿಕ್ಕೆ ಆಗಿರಲಿಲ್ಲ. ದಯಮಾಡಿ ಇದು ಮಹತ್ತರವಾದಂತಹ ವಿಚಾರವಾಗಿರುವುದರಿಂದ, ಇದರ ಬಗ್ಗೆ ಚರ್ಚೆಯಾಗಲೇಬೇಕು. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಒಮ್ಮೆ adjournment motion ಅನ್ನು ಕಟ್ಟು, ಅದನ್ನು convert ಮಾಡಿದ ಮೇಲೆ, ಅದೇ subject ಅನ್ನು ಮತ್ತೊಮ್ಮೆ adjournment motion ಅಡಿಯಲ್ಲಿ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. This is No. 1., No. 2 ಏನೆಂದರೆ ಇದನ್ನು ಬೇರೆ ರೂಪದಲ್ಲಿ ತಂದರೆ ಸರ್ಕಾರ ಖಂಡಿತವಾಗಿಯೂ ಚರ್ಚೆಗೆ ಸಿದ್ಧವಿದೆ, ಅದಕ್ಕೆ ಉತ್ತರವನ್ನೂ ಕೊಡುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಇದರ ಬಗ್ಗೆ ಮಾತನಾಡಲು ಹೇರಳವಾದಂತಹ ಅವಕಾಶವಿದೆ. ಆಗ ನೀವು ಚರ್ಚೆ ಮಾಡಬಹುದು, ನಮಗೇನೂ ತೊಂದರೆಯಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡಿ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನೀಡಿರುವ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಈಗಾಗಲೇ ಕಾರ್ಯಕಲಾಪ ಪಟ್ಟಿಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯ ಸಂಬಂಧದಲ್ಲಿ ಪ್ರಸ್ತಾಪಿಸಲು/ ಚರ್ಚಿಸಲು ಅವಕಾಶ ಇರುತ್ತದೆ. ಅಲ್ಲದೆ ಈ ವಿಷಯವು ಇತ್ತೀಚಿನ ವಿಷಯವಾಗಿರುವುದಿಲ್ಲ. ಆದರೆ ಮಾನ್ಯ ವಿರೋಧ ಪಕ್ಷ ನಾಯಕರು ಪ್ರಾಸ್ತಾವಿಕವಾಗಿ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಇತರರು ಈ ವಿಷಯವು ನಿಯಮಾವಳಿ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ವಿಷಯವನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಅಥವಾ ಬೇರೆ ಯಾವುದಾದರೂ ನಿಯಮದ ಅಡಿಯಲ್ಲಿ ತಂದಾಗ, ಇದರ ಮೇಲೆ ಚರ್ಚಿಸಲು ಅವಕಾಶ ಇರುವುದರಿಂದ, ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, This is not correct. ನೀವು ಇದರ ಬಗ್ಗೆ ಚರ್ಚೆಯೇ ಬೇಡವೆಂದರೆ ಹೇಗೆ?

ಅಧ್ಯಕ್ಷರು:– ನೀವು ಬೇರೆ ನಿಯಮದ ಅಡಿಯಲ್ಲಿ ತನ್ನಿ.

ಶ್ರೀ ಸಿದ್ದರಾಮಯ್ಯ:– ಇದನ್ನು ನೀವು 69ಕ್ಕೆ convert ಮಾಡಿ. ಹಿಂದೆ ನೀವೇ ನಿಯಮ 69ಕ್ಕೆ convert ಮಾಡಿದ್ದೀರಿ. How can you go back? ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ರೀತಿ ಮಾಡಬೇಡಿ. This is not right, please.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಇದರ ಬಗ್ಗೆ ತಾವು detail ಆಗಿ ಮಾತನಾಡಬಹುದು.

ಶ್ರೀ ಸಿದ್ದರಾಮಯ್ಯ:– No, No. We cannot co-operate with you. ಈ ರೀತಿಯಾದರೆ ನಾವು ಸಹಕಾರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– Governor's address ಮೇಲೆ ನೀವು ಮಾತನಾಡಬಹುದು.

ಶ್ರೀ ಸಿದ್ದರಾಮಯ್ಯ:– ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚಿಸುವಾಗ sky is the limit. ಏನು ಬೇಕಾದರೂ ಮಾತನಾಡಬಹುದು. ಆದರೆ ಅದಕ್ಕೆ ಉತ್ತರ ಬರುತ್ತದೆಯೇ? How can we expect specific reply on this? what is that? ನಾನೂ ಕಳೆದ 30 ವರ್ಷಗಳಿಂದ ಇಲ್ಲಿದ್ದೇನೆ. I can't understand. ಇದನ್ನು ನಿಯಮ 69ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಕೊಡಬೇಕು ಇಲ್ಲವೇ ನಿಯಮ 60 ಅಡಿಯಲ್ಲೇ ಚರ್ಚಿಸಲು ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಚರ್ಚೆಯೇ ಆಗಬಾರದು ಎನ್ನುವುದಾದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ಚರ್ಚೆ ಆಗಲೇಬೇಕು.

ಶ್ರೀ ಸಿದ್ದರಾಮಯ್ಯ:– In the last session, it has been converted into Rule 69. You have allowed that. ಅದು agenda ದಲ್ಲಿ ಬಂದಿತ್ತು. ಆದರೆ ಚರ್ಚೆ ಮಾಡಲಿಕ್ಕಾಗಲಿಲ್ಲ. It was not discussed. Government has not given reply on that. ಹೀಗಿರುವಾಗ ಅದೆಲ್ಲಿ ಚರ್ಚೆಯಾಗಿದೆ? It is very much coming under the adjournment motion. Please, either Rule 60 ರಲ್ಲಿ ಚರ್ಚಿಸಲು ಅವಕಾಶ ಕೊಡಬೇಕು. ಅದು ಬೇಡ ಎನ್ನುವುದಾದರೆ, ನಿಯಮ 69ಕ್ಕೆ convert ಮಾಡಬೇಕು. That is my argument. But, ಇದು ಆಗದೇ ಹೋದರೆ, we are not going to co-operate. ನೀವೇ ಅಸೆಂಬ್ಲಿ ನಡೆಸಿಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಮನವಿ ಮಾಡಿದ್ದೇವೆ. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾವು ಇವತ್ತೇ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ:– ನಾವು ಇವತ್ತೇ ಆ ಬಗ್ಗೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ:– Yes, we are representing it now.

ಶ್ರೀ ಸಿದ್ದರಾಮಯ್ಯ:– This is very strange. ಈ ರೀತಿ ಆಗಬಾರದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಪಿನ ಅನ್ವಯವೇ ನಾವು ಇವತ್ತು ನಿಮಗೆ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್:– ನಾನು ಒಪ್ಪಿಕೊಳ್ಳುತ್ತೇನೆ. ತಾವು preliminary submission ಮಾಡಿದ್ದೀರಿ. ಅದನ್ನೆಲ್ಲಾ ಮಾನ್ಯ ಅಧ್ಯಕ್ಷರು ಆಲಿಸಿದ್ದಾರೆ. ಮಾನ್ಯ ಅಧ್ಯಕ್ಷರು ತಮ್ಮ ವಿವೇಚನೆಯಿಂದ ಇದನ್ನು ನಿಯಮ 69ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಕೊಡಬಹುದು.

ಅಧ್ಯಕ್ಷರು:– ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಬೇರೆ ನಿಯಮದ ಅಡಿಯಲ್ಲಿ ಈ ಬಗ್ಗೆ ಚರ್ಚಿಸಲು ಅವಕಾಶ ಕೊಡಿ ಎಂದು ಕೇಳಿರುವುದರಿಂದ, ನಿಯಮ 60ನ್ನು ಬದಲಾಯಿಸಿ, ನಿಯಮ 69ರ ಅಡಿಯಲ್ಲಿ ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಈಗಲೇ ಚರ್ಚೆಯನ್ನು ಪ್ರಾರಂಭಿಸಲೇ?

ಶ್ರೀ ಎಸ್. ಸುರೇಶ್ ಕುಮಾರ್:– ಬೇಡ, ಇವತ್ತು ಆಗುವುದಿಲ್ಲ. ಅಜೆಂಡಾದಲ್ಲಿ ಇರುವುದನ್ನೆಲ್ಲಾ ಮೊದಲು ಮುಗಿಸಿ ಬಿಡೋಣ. ಗಮನ ಸೆಳೆಯುವ ಸೂಚನೆ, ವಿಧೇಯಕಗಳನ್ನೆಲ್ಲಾ ಮುಗಿಸೋಣ.

ಶ್ರೀ ಸಿದ್ದರಾಮಯ್ಯ:– ಈಗಲೇ ಪ್ರಾರಂಭ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:– ಬೇಡ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಪ್ರಾರಂಭ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಐದು ವರ್ಷಗಳ ಕಾಲ Leader of Opposition ಆಗಿದ್ದವರು. ನೀವು

ನಮ್ಮ ಸಹಾಯಕ್ಕೆ ಬರಬೇಕಾಗಿತ್ತು. ಅದನ್ನು ಬಿಟ್ಟು, ನೀವು ಯಾವಾಗಲೂ ನಮ್ಮನ್ನು ವಿರೋಧ ಮಾಡುತ್ತಿದ್ದೀರಲ್ಲಾ?

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೇ, ನಾಳೆ ಬೆಳಿಗ್ಗೆ ನಾನು ಇರುವುದಿಲ್ಲ. ಆದ್ದರಿಂದ ಇವತ್ತೇ ಚರ್ಚೆ ಪ್ರಾರಂಭಿಸುತ್ತೇನೆ. ಇವತ್ತು ಚರ್ಚೆ ಪ್ರಾರಂಭಿಸುವುದು ಬೇಡ ಎನ್ನುವುದಾದರೆ, ನಾನು Monday ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ್ ಬೊಮ್ಮಾಯಿ:– Strategically ಇವತ್ತು ಬೇಡವೆಂದು ನಾನು ಹೇಳುವುದು.

ಅಧ್ಯಕ್ಷರು:– ಆಯಿತು. Monday ಚರ್ಚೆ ಪ್ರಾರಂಭಿಸಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, Monday, immediately after question hour ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು:– ಆಯಿತು.

7. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಬರ ಎದುರಿಸುತ್ತಿರುವ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಮಹಾರಾಷ್ಟ್ರದ ಕೊಯ್ನಾ ಅಥವಾ ವಾರಣಾ ಜಲಾಶಯದಿಂದ ನೀರು ಬಿಡಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಪದೇ ಪದೇ ಬರ ಎದುರಿಸುತ್ತಿರುವ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಈ ಬಾರಿ ಕೃಷ್ಣಾ ನದಿಯ ನೀರು ಬಹಳ ಕಡಿಮೆಯಾಗಿದ್ದು, ಪೂರ್ವಯೋಜಿತವಾಗಿ ಮಹಾರಾಷ್ಟ್ರದ ಕೊಯ್ನಾ ಅಥವಾ ವಾರಣಾ ಜಲಾಶಯದಿಂದ ಕನಿಷ್ಠ ಐದು ಡಿ.ಎಂ.ಸಿ ನೀರನ್ನು ಬಿಡಿಸಲು ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.